# ಪಟ್ಟಾಧಿಕಾರ ಮಹೋತ್ಸವ ಸುದ್ದಿ

**ಚಿತ್ರದುರ್ಗ, ಫೆ. 11** - ಸ್ವಾಮಿಗಳಾದವರು ಶಿವಾನುಭವ, ಲೋಕಾನುಭವ ಮತ್ತು ಸ್ವಾನುಭಾವ ಪಡೆದು ಅಧ್ಯಯನಶೀಲರಾಗಿ ಅಂತರಂಗದ ಸಾಧನೆಯ ಮೂಲಕ ಸಮಾಜಕ್ಕೆ ಧರ್ಮ ಬೋಧನೆಯೊಂದಿಗೆ ಮಾರ್ಗದರ್ಶನ ಮಾಡಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಟಿ.ನರಸೀಪುರ ತಾಲ್ಲೂಕು ಚಿದರವಳ್ಳಿಯ ಶ್ರೀ ಸಿದ್ಧರಹಳ್ಳಿ ಪಾರಮಾರ್ಥ ಗವಿಮಠದಲ್ಲಿ ನಡೆದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರಿಗೆ ನಿರಂಜನ ನಿರಾಭಾರಿ ಪಟ್ಟಾಧಿಕಾರ ಮಹೋತ್ಸವದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಧ್ಯಾನ ಮಾಡುವುದರಿಂದ ವ್ಯಾಘ್ರತೆ, ಉದ್ವಿಗ್ನತೆಯನ್ನು ನಿಯಂತ್ರಿಸಬಹುದು. ನಾಲಿಗೆಯ ಮೇಲಿನ ನಿಯಂತ್ರಣ ಕಳೆದುಕೊಂಡಾಗ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಸಂಘರ್ಷಗಳು ನಡೆಯುತ್ತವೆ. ಅವುಗಳನ್ನು ನಿಯಂತ್ರಿಸಲು ಪಾರಮಾರ್ಥ ಪ್ರಜ್ಞೆ ಬೇಕು. ಬಸವಾದಿ ಶರಣರು ಸಂಸ್ಕಾರಯುಕ್ತ ಸಮಾಜ, ಸಮ ಸಮಾಜವನ್ನು ಕಟ್ಟಿದರು. ಬಸವತತ್ವ ಪಾಲಿಸದವರಿಗೆ ಉಳಿಗಾಲವಿಲ್ಲ. ಬಸವತತ್ವ ಬೋಧನೆ ಮತ್ತು ಆಚರಣೆಯೇ ಸ್ವಾಮಿಗಳ ಕರ್ತವ್ಯವಾಗಬೇಕು. ಎಲ್ಲರನ್ನು ಅಪ್ಪಿಕೊಳ್ಳುವುದೇ ಬಸವಪ್ರಜ್ಞೆ. ರಾಜಕಾರಣವು ಧರ್ಮದ ಪ್ರದಕ್ಷಣೆ ಮಾಡಬೇಕು. ಧರ್ಮದಿಂದ ರಾಜಕಾರಣದ ಪ್ರದಕ್ಷಣೆ ಆಗಬಾರದು ಎಂದು ಹೇಳಿದರು.

ಸ್ವಾಮಿಗಳು ಜಾತ್ಯಾತೀತರಾಗಬೇಕು. ಜಾತಿಯೊಳಗೆ ಇದ್ದು ಜಾತಿಯನ್ನು ಮೀರುವುದು. ಧಾರ್ಮಿಕ ಜೀವನಕ್ಕೆ ಜವಾಬ್ದಾರಿ ಇದೆ. ಜವಾಬ್ದಾರಿಯುತವಾಗಿ ಜೀವಿಸಬೇಕು. ಸ್ವಾಮಿಗಳಿಗೆ ಕಾಟ ಕೊಡಬೇಡಿ ಭಕ್ತಿ ಕೊಡಿ ಭಕ್ತಿ ಸಮರ್ಪಣೆ ಮಾಡಿ. ಸ್ವಾಮಿಗಳು ಸಮಾಜದ ಒಬ್ಬ ಮಗನಿದ್ದ ಹಾಗೆ. ಸ್ವಾಮಿಗಳನ್ನು ಚೆನ್ನಾಗಿ ನೋಡಿಕೊಳ್ಳಿ. ಸಮಾಜವೇ ದೈವ ಎಂದು ಜೀವನ ನಡೆಸುತ್ತಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀಗಳು ಶ್ರೀ ಸಿದ್ಧರಹಳ್ಳಿ ಮಠದ ಅಭಿವೃದ್ಧಿ ಕಾರ್ಯಗಳಿಗೆ ಹತ್ತು ಲಕ್ಷ ರೂ.ಗಳ ದೇಣಿಗೆಯನ್ನು ನೀಡಿದರು.

ವಿರೋಧಪಕ್ಷದ ನಾಯಕ ಸಿದ್ಧರಾಮಯ್ಯ ಮಾತನಾಡಿ, ಮುರುಘಾ ಶರಣರು ಸ್ವಾಮಿಗಳಿಗೆ ಮತ್ತು ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುತ್ತ ಬಂದಿದ್ದಾರೆ. ಮಠಗಳು ವ್ಯಕ್ತಿಗೆ ಧರ್ಮ ಮಾರ್ಗದರ್ಶನವನ್ನು ನೀಡಿ ಮನುಷ್ಯನನ್ನಾಗಿ ರೂಪಿಸುವ ಕೆಲಸ ಮಾಡುತ್ತವೆ. ಸಮಾಜದಲ್ಲಿ ಧರ್ಮಜಾಗೃತಿ ಮೂಡಿಸಿ ಜನರನ್ನು ಪರಿವರ್ತಿಸುವ ಕೆಲಸವನ್ನು ಮಾಡಬೇಕು. ಬಸವಾದಿ ಶರಣರು 12ನೇ ಶತಮಾನದಲ್ಲಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಸಮಾಜ ನಿರ್ಮಾಣ ಮಾಡಿದರು. ಆದರೆ 21ನೇ ಶತಮಾನದಲ್ಲಿ ಜಾತೀಯತೆ, ಅಸ್ಪೃಶ್ಯತೆ ಇನ್ನು ಮುಂತಾದ ಸಮಸ್ಯೆಗಳು ಹಾಗೇ ಇವೆ. ಸಮಸಮಾಜವೆಂದರೆ ಮನುಷ್ಯತ್ವವಿರುವ ಸಮಾಜ. ನಾವು ಜಾತಿವಾದಿಗಳಾಗದೆ ಮಾನವಜಾತಿಯವರಾಗಬೇಕು ಎಂದರು.

ಹುಟ್ಟು ಸಾವಿನ ನಡುವೆ ಮಾನವರಾಗಿ ಬಾಳಬೇಕು. ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ ಸನ್ಮಾರ್ಗದತ್ತ ಕೊಂಡೊಯ್ಯುವುದೇ ಸ್ವಾಮಿಗಳ ಕೆಲಸ. ಯಾರನ್ನೇ ಆಗಲಿ ಎಲ್ಲರೂ ನಮ್ಮವರೆಂದು ಕಾಣಬೇಕು. ಮುರುಘಾ ಶರಣರು ಎಲ್ಲ ಕೆಳವರ್ಗದ ಜನರಿಗೆ ಮಠಗಳನ್ನು ಸ್ಥಾಪಿಸಿದ್ದಾರೆ. ಅಧಿಕಾರ ಸಿಗುವುದು ಮಜಾ ಮಾಡಲಿಕ್ಕೆ ಅಲ್ಲ. ಕುರ್ಚಿಯ ಗೌರವವನ್ನು ಉಳಿಸಬೇಕು. ಪಟ್ಟಭದ್ರ ಹಿತಾಸಕ್ತರು ಸಮಾಜದಲ್ಲಿ ಬದಲಾವಣೆ ಮಾಡಲು ಬಿಡುವುದಿಲ್ಲ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಡಾ. ಮುಮ್ಮಡಿ ಶಿವರುದ್ರ ಸ್ವಾಮಿಗಳು, ಡಾ. ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಶ್ರೀ ಶಿವಬಸವ ಸ್ವಾಮಿಗಳು, ಶ್ರೀ ಬಸವಪ್ರಭು ಸ್ವಾಮಿಗಳು, ಶ್ರೀ ವಚನಾನಂದ ಸ್ವಾಮಿಗಳು, ಡಾ. ಬಸವಕುಮಾರ ಸ್ವಾಮಿಗಳು, ಡಾ. ಶಾಂತವೀರ ಮಹಾಸ್ವಾಮಿಗಳು, ಶ್ರೀ ವೇಮನಾನಂದ ಸ್ವಾಮಿಗಳು, ಶ್ರೀ ಬಸವ ಮಾಚಿದೇವ ಸ್ವಾಮಿಗಳು, ಮೊದಲಾದ ಹರಗುರು ಚರಮೂರ್ತಿಗಳು, ಶಾಸಕ ಅಶ್ವಿನ್‌ಕುಮಾರ್, ಮಾಜಿ ಸಚಿವ ಎಚ್.ಸಿ. ಮಹದೇವಪ್ಪ ಮತ್ತು ಭಕ್ತಾದಿಗಳು ಭಾಗವಹಿಸಿದ್ದರು.




ಶ್ರೀ ಸಿದ್ಧರಹಳ್ಳಿ ಪಾರಮಾರ್ಥ

